# ಭತ್ತದಲ್ಲಿ ಗಂಧೀ ತೆನೆ ತಿಗಣೆ ಕೀಟದ ಭಾಧೆ





## ಕೀಟದ ಹಾನಿಯ ಲಕ್ಷಣಗಳು

ಪ್ರೌಢ ಮತ್ತು ಅಪ್ಸರೆ ಕೀಟಗಳು ಹಾಲು ತುಂಬಿದ ಕಾಳುಗಳಿಂದ ರಸವನ್ನು ಹೀರುತ್ತವೆ. ಇದರಿಂದ ಕಾಳುಗಳು ಜೊಳ್ಳಾಗಿ ಕಂದುಬಣ್ಣಕ್ಕೆ ತಿರುಗುತ್ತವೆ. ಹಾನಿಗೊಳಗಾದ ಭತ್ತದ ಹುಲ್ಲು ಸಹ ದುರ್ವಾಸನೆಯಿಂದ ಕೂಡಿರುತ್ತದೆ. ಈ ಕೀಟದ ಮರಿ ತಿಗಣೆಗಳು ಕೆಲವು ದಿನಗಳವರೆಗೆ ಬದುವಿನ ಮೇಲಿರುವ ಕಳೆಗಳ ಮೇಲೆ ವಾಸಿಸುತ್ತಿದ್ದು, ಭತ್ತವು ಹೂ ಬಿಡುವ ಸಮಯಕ್ಕೆ ಬೆಳೆಯನ್ನು ಬಾಧಿಸುತ್ತವೆ.

## ಹತೋಟಿ ವಿಧಾನಗಳು

- ಗದ್ದೆಯ ಬದು ಮತ್ತು ಸುತ್ತಮುತ್ತಲಿನ ಪ್ರದೇಶಗಳಿಂದ ಕಳೆ ಮತ್ತು ಇತರೆ ಆಶ್ರಯ ಸಸ್ಯಗಳನ್ನು ತೆಗೆದು ಸ್ವಚ್ಛಯನ್ನು ಕಾಪಾಡಬೇಕು.
- ಕೀಟವಿರುವ ಸೂಚನೆಯನ್ನು ನೋಡಿಕೊಂಡು ಶೇ. 5 ರ 8 ಕೆ.ಜಿ. ಮೆಲಾಥಿಯನ್ ಪುಡಿಯನ್ನು ಪ್ರತೀ ಎಕರೆ ಪ್ರದೇಶಕ್ಕೆ ಧೂಳೀಕರಿಸಬೇಕು. ಅಥವಾ ಒಂದು ಲೀಟರ್ ನೀರಿನಲ್ಲಿ 2.0 ಮಿ.ಲೀ. ಮೆಲಾಥಿಯನ್ ಅಥವಾ 2.0 ಮಿ.ಲೀ. ಕ್ಲೋರೊಪೈರಿಫಾಸ್ ಕೀಟನಾಶಕವನ್ನು ಬೆರಸಿ ಸಿಂಪಡಿಸಬೇಕು.
- ಸಿಂಪರಣೆಯನ್ನು ಬದುಗಳಿಂದ ವೃತ್ತಾಕಾರದಲ್ಲಿ ಪ್ರಾರಂಭಿಸಿ ಗದ್ದೆಯ ಮಧ್ಯಭಾಗಕ್ಕೆ ಕೊನೆಗೊಳಿಸುವುದರಿಂದ ಪರಿಣಾಮಕಾರಿಯಾಗಿ ಕೀಟವನ್ನು ನಿಯಂತ್ರಿಸಬಹುದು.

ಭಾ.ಕೃ.ಅ.ಪ– ಕೃಷಿ ವಿಜ್ಞಾನ ಕೇಂದ್ರ, ಗೋಣಿಕೊಪ್ಪಲು, ಕೊಡಗು ಜಿಲ್ಲೆ, ದೂರವಾಣಿ: 08274-295274